Un-employed AlloPathic Doctors

2717. SMT.B. M. Thippeswamy (Bharanmaagar).—Will the MinisterFor Health be pleased to State.—

a) The number of qualified Alopathic Doctors are unemployed in the State ;

b) The number of Assistant Surgeons posts are vacant :

c) The number of post Graduates with MS and MD are posted to Health Units :

d) Steps taken by Government : th setright this ?

SRI B. RACHAIAH (Health Minister).—

a) 551 as on 1-3-1988
(registered in employment exchange)

b) 324

c) M.D. -30
M. S. -19

d) Steps will be taken by Government at the time of issue of postings,

ಶ್ರೀ ಬಿ. ಎಂ. ತಿಪ್ಪೇಸ್ವಾಮಿ —ರಾಜ್ಯದಲ್ಲಿ ನಿರುದ್ಯೋಗಿಗಳಾಗಿರುವ ಅರ್ಹ ಅಲೋಪತಿಕ್ ವೈದ್ಯರುಗಳ ಸಂಖ್ಯೆ ೫೫೧ ಎಂದು ಹೇಳಿದ್ದಾರೆ. ಈ ಅಂಕಿಯನ್ನು ಮಾನ್ಯ ಮಂತ್ರಿಗಳು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಿಂದ ತೆಗೆಸಿಕೊಂಡರೋ ಅಥವಾ ಅಂಡರ್ ಸೆಕ್ರೆಟರಿ ಅವರು ಕೊಟ್ಟರೋ ನನಗೆ ಗೊತ್ತಿಲ್ಲ. ಈಗ ನಮ್ಮಲ್ಲಿ ೧೯ ಮೆಡಿಕಲ್ ಕಾಲೇಜುಗಳಿವೆ. ಪ್ರತಿ ಕಾಲೇಜುನಿಂದ ವರ್ಷವೊಂದಕ್ಕೆ ಕನಿಷ್ಟ ೫೦ ಜನ ಡಾಕ್ಟರ್‌ಗಳು ಪಾಸಾಗಿ ಹೊರ ಬಂದರೂ ಸಹ ೯೫೦ ಜನರಿಗೆ ಇವರು ಕೆಲಸ ಕೊಡಬೇಕಾಗುತ್ತದೆ. ಆದ್ದರಿಂದ ಇಲ್ಲಿ ಇವರಿಗೆ ೫೫೧ ಎಂಬ ಅಂಕಿ ಎಲ್ಲಿಂದ ಬಂತು ?

ಶ್ರೀ ಬಿ. ರಾಚಯ್ಯ :—ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ರಿಜಿಸ್ಟರ್ಡ್ ಮಾಡಿಸಿರುವವರ ಅಂಕಿಯನ್ನು ಇಲ್ಲಿ ಕೊಡಲಾಗಿದೆ.

ಶ್ರೀ ಬಿ. ಎಂ ತಿಪ್ಪೇಸ್ವಾಮಿ.—ಕರ್ನಾಟಕ ಬ್ಯಾಂಬೂನ ಐ. ಎಂ. ಎ.ನಲ್ಲಿ ತಮ್ಮ ಹೆಸರುಗಳನ್ನು ರಿಜಿಸ್ಟ್ರೇಷನ್ ಮಾಡಿಸಿರುವವರೂ ಸಹ ಇದರಲ್ಲಿ ಸೇರಿದ್ದಾರೆಯೇ ಹೇಗೆ ? ಪಿ. ಎಸ್. ಸಿ. ನವರು ನೂರು ಜನ ಡಾಕ್ಟರ್‌ಗಳು ಬೇಕು ಎಂದು ಆರ್ಡರ್‌ಗಳನ್ನು ಕರೆದಾಗ ಎಷ್ಟು ಜನ ಅರ್ಜಿಗಳನ್ನು ಹಾಕಿ ಕೊಳ್ಳುತ್ತಾರೆಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು ? ಏಕೆಂದರೆ, ಇಲ್ಲಿ ಕೊಟ್ಟಿರುವ ಅಂಕಿಗಳ ಬಗ್ಗೆ ನನಗೆ ಅನುಮಾನ ಇದೆ.

ಶ್ರೀ ಬಿ. ರಾಚಯ್ಯ,—ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ಯಾರು ಯಾರು ತಮ್ಮ ಹೆಸರುಗಳನ್ನು ರಿಜಿಸ್ಟ್ರೇಷನ್ ಮಾಡಿಸಿದ್ದಾರೋ, ಅವರ ಅಂಕಿಗಳನ್ನು ಇಲ್ಲಿ ಕೊಟ್ಟಿದ್ದೇನೆ.

ಶ್ರೀ ಬಿ. ಎಂ. ತಿಪ್ಪೇಸ್ವಾಮಿ.—ಇಲ್ಲಿ ನನ್ನ (ಬಿ) ಪ್ರಶ್ನೆಗೆ ಉತ್ತರವಾಗಿ ತಾವು ೩೨೪ ಎಂದು ಹೇಳಿದ್ದೀರಿ. ಅದೇ ರೀತಿ ನನ್ನ (೧) ಪ್ರಶ್ನೆಗೆ ಉತ್ತರವಾಗಿ ಎಂ. ಡಿ. ೩೦ ಮತ್ತು ಎಂ. ಎಸ್. ೧೯ ಎಂದು ಹೇಳಿದ್ದೀರಿ. ಇದನ್ನು ಕರೆಕ್ಟ್ ಮಾಡುವುದು ಯಾವಾಗ steps will be taken by Government at the time issue of postings ಎಂದು ಹೇಳಿದ್ದಾರೆ. If they are already working ಇದನ್ನು ಕರೆಕ್ಟ್ ಮಾಡುವುದು ಯಾವಾಗ.

ಶ್ರೀ ಬಿ. ರಾಚಯ್ಯ.—ಈಗ ಈ ಆಪೋಗ್ಯ ಕೇಂದ್ರಗಳನ್ನು ತೆರೆಯುತ್ತಿದ್ದೇವಲ್ಲ ಅಲ್ಲಿ ಇವರನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಎಂ.ತಿಪ್ಪೇಸ್ವಾಮಿ.—ಇಂಪಾರ್ಟೆಂಟ್ ಕೊಶ್ಚನ್ ಬಿಟ್ಟು ಹೋಗಿದೆ. " How many undergraduates are working in major hospitals in districts and in teaching hospitals ? '

ಶ್ರೀ ರಾಮಪ್ಪ.—ಈಗ ಎಷ್ಟು ಹುದ್ದೆಗಳು ಖಾಲಿ ಇದೆ. ಇದನ್ನು ನೋಡಿದರೆ ಉದ್ಯೋಗ ಕೊಡುವ ಪರಿಸ್ಥಿತಿ ನಿಮ್ಮಲ್ಲಿದೆಯೇ ? ನಮ್ಮಲ್ಲಿ ಎಂಬಿಬಿಎಸ್ ಓದಿದವರು ಇಲ್ಲ, ಪ್ರೊಫೆಸರ್ಸ್ ಇಲ್ಲ. ಎಷ್ಟು ಹುದ್ದೆಗಳು ಖಾಲಿ ಇದೆ ಹೇಳಿ.

ಶ್ರೀ ಬಿ. ರಾಚಯ್ಯ.—ಅದಕ್ಕೆ ಬೇರೆ ಪ್ರಶ್ನೆ ಕೇಳಿದರೆ ಹೇಳುತ್ತೇನೆ. ವೈದ್ಯಕೀಯದಲ್ಲಾಗಲಿ, ಇಂಜನಿಯರಿಂಗ್‌ನಲ್ಲಾಗಲಿ ಯಾರು ಪದವಿ ಪಡೆದುಕೊಳ್ಳುತ್ತಾರೋ ಅವರಿಗೆ ಸರ್ಕಾರ ಉದ್ಯೋಗ ಕೊಡುತ್ತದೆ ಎಂದು ಭರವಸೆ ಏನಿಲ್ಲ. ಏಕೆಂದರೆ ಅವರು ತಾಂತ್ರಿಕ ಸಿಬ್ಬಂದಿಯಾಗಿರುವುದರಿಂದ ಅವರು ಸ್ವಂತವಾಗಿ ತಮ್ಮ ಕಾರ್ಯದಲ್ಲಿ ನಿರತರಾಗಬಹುದು ಅಥವಾ ಕ್ಲಿನಿಕಲ್ ತೆಗೆಯಬಹುದು. ಅದಕ್ಕೆ ಬ್ಯಾಂಕುಗಳು ಸಾಲ ಕೊಡುತ್ತವೆ. ಆ ದೃಷ್ಟಿಯಲ್ಲಿ ಉದ್ಯೋಗವನ್ನು ಅವಲಂಬಿಸ ಬೇಕಾಗುತ್ತದೆ.

ಶ್ರೀ ಎಂ. ರಾಮಪ್ಪ.—ಮಾನ್ಯ ರಾಚಯ್ಯನವರು ಕಳಕಳಿಯಿಂದ ಪೋಸ್ಟಿಂಗ್ಸ್ ಕೊಡುತ್ತಾರೆ, ಚೀಫ್ ಮಿನಿಸ್ಟರ್ ಅದನ್ನು ಕ್ಯಾನ್ಸಲ್ ಮಾಡುತ್ತಾರೆ. ನಮ್ಮಲ್ಲಿ ೪೦ ಪರ್ಸೆಂಟ್ ಪ್ರೊಫೆಸರ್ಸ್ ಇಲ್ಲ, ಬಳ್ಳಾರಿಗೆ ಒಬ್ಬರೂ ಬರುವುದಿಲ್ಲ. ಈ ಬಗ್ಗೆ ಕಾಲಿಂಗ್ ಅಟೆನ್‌ಷನ್ ಹಾಕಿದರೂ ಉತ್ತರ ಇಲ್ಲ. ಇವರು ಹಾಕುತ್ತೇನೆಂದು ಹೇಳುತ್ತಾರೆ, ಅವರು ಕ್ಯಾನ್ಸಲ್ ಮಾಡುತ್ತಾರೆ. ಕಾಲೇಜಿನಲ್ಲಿ ಯಾರೂ ಇಲ್ಲ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಅವರು ದೂರು ಹೇಳುತ್ತಾ ಇಲ್ಲ, ಅನುಕಂಪದಿಂದ ಹೇಳುತ್ತಾ ಇದ್ದಾರೆ.

ಶ್ರೀ ಬಿ. ರಾಚಯ್ಯ.—ಈ ಪ್ರಶ್ನೆ ಇದರಲ್ಲಿ ಬರುವುದಿಲ್ಲ ಆದರೂ ಕೂಡ ಹೇಳುತ್ತಾ ಇದ್ದೇನೆ. ಈ ಸಾರಿ ಬಳ್ಳಾರಿ–ಹುಬ್ಬಳ್ಳಿಯಲ್ಲಿ ಖಾಲಿ ಇರುವ ಕಡೆ ಅವರು ಹೋಗುವ ಹಾಗೆ ಮಾಡುತ್ತೇನೆ ಹೋಗದೇ ಹೋದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಕುಂದಾಪುರದಲ್ಲಿ ರಸ್ತೆ ಸಾರಿಗೆ ಡಿಪೋ

೨೨೯೧. ಶ್ರೀ ಜಿ. ಎಸ್ ಆಚಾರ್(ಬೈಂದೂರ್).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಡಿಪೋ ರಚಿಸಿ ಅನೇಕ ತಿಂಗಳು ಕಳೆದಿದ್ದರೂ ಅದರ ಕಾರ್ಯರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಹಾಲಿನಿಗಮದ ಬಸ್ಸುಗಳು ರಸ್ತೆ ಬದಿಯಲ್ಲಿ ಮರಗಳ ಅಡಿಯಲ್ಲಿ ನಿಲ್ಲಿಸುತ್ತಿರುವುದರಿಂದ ಬಸ್ಸುಗಳಿಗಾಗುವ ತೊಂದರೆ. ಬಸ್ಸುಗಳು ದಿನವಿಡೀ ರಸ್ತೆ ಬದಿ ನಿಂತಿದ್ದರಿಂದ ಸಾರ್ವಜನಿಕರಿಗಾಗುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ ಈ ತೊಂದರೆಗಳನ್ನು ನಿವಾರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ;